**ಓ ಎಸ್ ನಂಃ 267-2022** **ಪಿ ಡಬ್ಲ್ಯೂ - 1**

**ಸಾಕ್ಷಿಯನ್ನು ದಿನಾಂಕಃ 21.08.2024 ರಂದು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀಸವಾಲುಃ** ಪ್ರತಿವಾದಿಗಳ ಪರ ಶ್ರೀ ಜಿ ಆರ್ ಹೆಚ್ ವಕೀಲರಿಂದ

ಆಸ್ತಿ ಸಂಖ್ಯೆಃ208/3 ನನ್ನ ಹೆಂಡತಿಯ ಹೆಸರಿನಲ್ಲಿದೆ. ಸದರಿ ಮನೆಯಲ್ಲಿ ನಾವು ವಾಸವಾಗಿದ್ದೇವೆ ಎಂದರೆ ಸರಿ. ಸದರಿ ಆಸ್ತಿಯು ಮೊದಲಿಗೆ ನನ್ನ ತಂದೆಯ ಹೆಸರಲ್ಲಿತ್ತು. ಸದರಿ ಜಾಗದಲ್ಲಿ ಸರ್ಕಾರದಿಂದ ಸಹಾಯದನವನ್ನು ಪಡೆದು ಮನೆ ನಿರ್ಮಿಸಿಕೊಟ್ಟಿದ್ದೇವೆ ಎಂದರೆ ಸರಿ. ನಾವು ಖಲ್ಲಾ ಜಾಗದಲ್ಲಿ ಮನೆಯನ್ನು ಕಟ್ಟಿದ್ದೇವೆ. ನನ್ನ ತಂದೆಗೆ ಒಟ್ಟು 4 ಜನ ಅಣ್ಣ ತಮ್ಮಂದಿರು. ನನ್ನ ಅಜ್ಜನ ಹೆಸರು ದೊಡ್ಡಬಸಪ್ಪ.

29.03.1975, 31.03.1984 ಮತ್ತು 14.11.1988 ರಲ್ಲಿ ನನ್ನ ಅಜ್ಜ ದೊಡ್ಡಬಸಪ್ಪನ ಆಸ್ತಿಗಳನ್ನು ವಿಭಾಗ ಮಾಡಿಕೊಂಡ ಬಗ್ಗೆ ಡೈರಿ ನಮೂದುಗಳು ಇವೆ ಎಂದರೆ ಸರಿಯಲ್ಲ. ಸದರಿ ವಿಭಾಗದಲ್ಲಿ ನನ್ನ ತಂದೆಯ ಪಾಲಿಗೆ 6 ಎಕರೆ 24 ಗುಂಟೆ ಜಮೀನು ಬಂದಿತ್ತು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಮನೆಯ ಆಸ್ತಿಗಳಲ್ಲಿ ಯಾವುದೇ ಪಾಲು ಆಗಿರಲಿಲ್ಲ ಎಂದು ನುಡಿಯುತ್ತಾರೆ.

ಮಲ್ಲಪ್ಪ ಶಿಗಿಗಟ್ಟಿ ರವರಿಗೆ 1 ಎಕರೆ 5 ಗುಂಟೆ ಜಮೀನನ್ನು ಮಾರಾಟ ಮಾಡಿದ್ದೇನೆ ಎಂದರೆ ಎಂದರೆ ಸರಿಯಲ್ಲ. ನಾಗಪ್ಪ ಹೊಸಳ್ಳಿ ರವರಿಗೆ 2 ಎಕರೆ 14 ಗುಂಟೆ ಮತ್ತು 30 ಗುಂಟೆ ಜಮೀನುಗಳನ್ನು ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ. ಯಲ್ಲಪ್ಪ ಹೊಸಳ್ಳಿ ರವರಿಗೆ 1 ಎಕರೆ 8 ಗುಂಟೆ ಜಮೀನನ್ನು ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಆಸ್ತಿಗಳು ವಾಟನಿ ಆಗಿಲ್ಲ ಎಂದು ನುಡಿಯುತ್ತಾರೆ. ಸದರಿ ಆಸ್ತಿಗಳು ಈಗ ಯಾರ ಹೆಸರಿನಲ್ಲಿವೆ ಎಂಬುದು ಗೊತ್ತಿಲ್ಲ. ನನ್ನ ತಂದೆಗೆ ವಾಟನಿಯಲ್ಲಿ ಬಂದಂತಹ ಆಸ್ತಿಗಳ ಪೈಕಿ 4 ಸರ್ವೇ ನಂ. ಆಸ್ತಿಗಳನ್ನು ಮಾರಾಟ ಮಾಡಿದ್ದೇವೆ ಎಂದರೆ ಸರಿಯಲ್ಲ. ನಾನು ಪಸ್ತುತ 1 ಎಕರೆ 7 ಗುಂಟೆ ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದೇನೆ. ಸದರಿ ಆಸ್ತಿಯ ದಾಖಲೆಗಳನ್ನು ಈ ದಾವೆಯಲ್ಲಿ ಹಾಜರುಪಡಿಸಿಲ್ಲ. ಸಾಕ್ಷಿ ಮುಂದುವರೆದು ದಾವಾ ಆಸ್ತಿಯಲ್ಲಿ ಮಾತ್ರ ವಿಭಾಗ ಬಾಕಿ ಇರುವುದರಿಂದ ಈ ದಾವೆಯನ್ನು ಹೂಡಿರುವುದಾಗಿ ನುಡಿಯುತ್ತಾರೆ. ಸದರಿ 1 ಎಕರೆ 7 ಗುಂಟೆ ಜಮೀನು ನನ್ನ ಮಗನ ಹೆಸರಿನಲ್ಲಿದೆ ಎಂದರೆ ಸರಿಯಲ್ಲ.

ವಿಭಾಗದಲ್ಲಿ ಬಂದಂತಹ 5 ಆಸ್ತಿಗಳ ಪೈಕಿ 4 ಆಸ್ತಿಗಳನ್ನು ಈಗಾಗಲೇ ಮಾರಾಟ ಮಾಡಿ ಉಳಿದ 1 ಆಸ್ತಿಯನ್ನು ನನ್ನ ಮಗನ ಹೆಸರಿಗೆ ಮಾಡಿದ್ದು ಕೇವಲ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ಹೂಡಿ ಸುಳ್ಳು ದಾಖಲೆಗಳನ್ನು ಹಾಜರುಪಡಿಸಿ ಸುಳ್ಳು ಸಾಕ್ಷ್ಯ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಪ್ರತಿವಾದಿಗಳು ಸುಸಜ್ಜಿತವಾದ ಮನೆಯನ್ನು ನಿರ್ಮಿಸಿ ಕೊಂಡಿದ್ದಾರೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**